ಶ್ರೀ ಬಿ.ಎಸ್. ಹೊರಟ್ಟಿ :– ಇದಕ್ಕೆ ಮಾಹಿತಿ ಪಡೆದುಕೊಂಡು ಅನಂತರ, ತಮಗೆ ಉತ್ತರ ಕೊಡುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ :– That is good

10. ಗಮನ ಸೆಳೆಯುವ ಸೂಚನೆ

5) ವಿಷಯ :– ರಾಯಚೂರು ನಗರಸಭೆಯಲ್ಲಾಗಿರುವ ಅವ್ಯವಹಾರದ ಬಗ್ಗೆ.

ಶ್ರೀ ಎ. ಪಾಪರೆಡ್ಡಿ (ರಾಯಚೂರು) :– ರಾಯಚೂರು ನಗರಸಭೆಯಯಲ್ಲಿನ ಅವ್ಯವಹಾರಗಳ ಬಗ್ಗೆ ಲೋಕಾಯುಕ್ತರು ವರದಿ ನೀಡಿದ್ದಾಗ್ಯೂ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳದಿರುವ ಬಗ್ಗೆ ಪೌರಾಡಳಿತ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಆರ್. ಅಶೋಕ್ (ಆರೋಗ್ಯ ಸಚಿವರು) (ಪೌರಾಡಳಿತ ಸಚಿವರ ಪರವಾಗಿ):– ರಾಯಚೂರು ನಗರಸಭೆಯಲ್ಲಿನ ಅವ್ಯವಹಾರ ಹಾಗೂ ಅಕ್ರಮಗಳ ಕುರಿತಂತೆ ತನಿಖೆ ನಡೆಸಿ ವರದಿ ಸಲ್ಲಿಸುವ ಸಲುವಾಗಿ ಪ್ರಕರಣವನ್ನು ಮಾನ್ಯ ಲೋಕಾಯುಕ್ತಕ್ಕೆ ವಹಿಸಲಾಗಿತ್ತು. ಅದರಂತೆ ಈ ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿ/ನೌಕರರ ವಿರುದ್ಧ ಮಾನ್ಯ ಲೋಕಾಯುಕ್ತರಿಂದ ವಿಚಾರಣಾ ವರದಿ ಬಂದಿದ್ದು, ಅದರಂತೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಅಲ್ಲದೇ ಶೇ. 18ರ ಯೋಜನೆಯಲ್ಲಿ ರಾಯಚೂರು ನಗರಸಭೆಯ ಆಯವ್ಯಯದಲ್ಲಿ ತೆಗೆದಿರಿಸಲಾಗಿದ್ದ ಮೊತ್ತದಲ್ಲಿ ಸಾಮೋಚಿತ ಚಟುವಟಿಕೆಗಳಿಗೆ ಶೇ. 40. ಆರ್ಥಿಕ ಚಟುವಟಿಕೆಗಳಿಗೆ ಶೇ. 40 ಹಾಗೂ ಇತರೆ ಚಟುವಟಿಕೆಗಳಿಗೆ ಶೇ. 20 ರಷ್ಟು ಖರ್ಚುಮಾಡುವ ಕುರಿತಂತೆ ಕ್ರಿಯಾ ಯೋಜನೆಯನ್ನು ತಯಾರಿಸಿ ಸಾಮಾನ್ಯ ಮಹಾ ಸಭೆಯಲ್ಲಿ ಅನುಮೋದಿಸಿಕೊಂಡು ಅನುಮೋದನೆಗೊಂಡ ಕ್ರಿಯಾ ಯೋಜನೆಗಳಿಗೆ ಜಿಲ್ಲಾಧಿಕಾರಿಗಳ ಮಂಜೂರಾತಿ ಪಡೆದುಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ. ಶೇ. 18 ರ ಯೋಜನೆಯ ಮೊತ್ತವನ್ನು ಸಾಮಾಜಿಕ, ಆರ್ಥಿಕ ಹಾಗೂ ಇತರೆ ಚಟುವಟಿಕೆಗಳಿಗೆ ವಿನಿಯೋಗಿಸಲಾಗುತ್ತಿದೆ.

ಅಲ್ಲದೆ, ರಾಯಚೂರು ನಗರಸಭೆಯ ನೈರ್ಮಲೀಕರಣಕ್ಕೆ ಸಂಬಂಧಿಸಿದಂತೆ ಒಟ್ಟು 4 ಪ್ಯಾಕೇಜುಗಳನ್ನು ಮಾಡಿ ಅವುಗಳಲ್ಲಿ 1, 2 ಮತ್ತು 3 ನೇ ಪ್ಯಾಕೇಜುಗಳನ್ನು ಖಾಸಗಿಯವರಿಗೆ ನೀಡಲಾಗಿದ್ದು, ತತ್ಸಂಬಂಧದಲ್ಲಿನ ಕ್ರಿಯಾ ಯೋಜನೆಗೆ ಪೌರಾಡಳಿತ ನಿರ್ದೇಶನಾಲಯದ ಅನುಮೋದನೆ ಪಡೆದುಕೊಳ್ಳಲಾಗಿದೆ. ಪ್ಯಾಕೇಜ್ ನಂ. 1 ರಲ್ಲಿ 40 ಜನ, ಪ್ಯಾಕೇಜ್ 2 ರಲ್ಲಿ 78 ಜನ ಮತ್ತು ಪ್ಯಾಕೇಜ್ ನಂ3 ರಲ್ಲಿ 62 ಜನ ಒಟ್ಟು 180 ಜನ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದು, ಡಿಸೆಂಬರ್ 2006 ರವರೆಗೆ ಗುತ್ತಿಗೆದಾರರ ಮೂಲಕ ವೇತನ ಪಾವತಿಸಲಾಗಿದೆ.

ಪ್ಯಾಕೇಜ್ ನಂ 4 ರಲ್ಲಿ ನೈರ್ಮಲೀಕರಣಕ್ಕಾಗಿ ಒಟ್ಟು 70 ಜನ ಪೌರಕಾರ್ಮಿಕರು ಹಾಗೂ ಪ್ರಾಧಿಕರಣ ಸಂಗ್ರಹಣೆಯಲ್ಲಿ ಒಟ್ಟು 50 ಜನ ಮತ್ತು ಮಲೇರಿಯಾ ವಿಭಾಗದಲ್ಲಿ 11 ಜನ ಒಟ್ಟು 131 ಜನ ಖಾಯಂ ಸಿಬ್ಬಂದಿಗಳು ಕೆಲಸ ನಿರ್ವಹಿಸುತ್ತಿದ್ದು, ಸದರಿ ಸಿಬ್ಬಂದಿಯವರಿಗೆ ಎಸ್ಎಫ್ಸಿ ವೇತನ ಅನುದಾನದಿಂದ ಪ್ರತಿ ತಿಂಗಳು ವೇತನ ಪಾವತಿ ಮಾಡಲಾಗುತ್ತಿದೆ. ಪ್ರಸ್ತುತದಲ್ಲಿ ಯಾವುದೇ ವೇತನವನ್ನು ಪಾವತಿಸುವುದು ಬಾಕಿಯಿರುವುದಿಲ್ಲ.

ಶ್ರೀ ಎ. ಪಾಪರೆಡ್ಡಿ :– ಅವರು ಕೊಟ್ಟಿರುವ ಮಾಹಿತಿಯಲ್ಲಿ ತಪ್ಪಿದೆ. ಅದಕ್ಕೆ ಅಧಿಕಾರಿಗಳು ಜವಾಬ್ದಾರರಾಗಿದ್ದಾರೆ. ಈ ಹಿಂದೆಯೇ ರಾಯಚೂರು ನಗರಸಭೆಯ ಹಿಂದಿನ ಅಧ್ಯಕ್ಷರ ಮೇಲೆ ಗುರುತರವಾದ ಆಪಾದನೆಯನ್ನು ಮಾಡಿದ್ದೇವೆ. ಜೊತೆಗೆ ಲೋಕಾಯುಕ್ತರೂ ಸೆಪ್ಟೆಂಬರ್ ತಿಂಗಳಿನಲ್ಲಿಯೇ ಇದರ ಬಗ್ಗೆ ವರದಿಯನ್ನೂ ಕೊಟ್ಟಿದ್ದಾರೆ. ಅಲ್ಲಿನ ಅಧ್ಯಕ್ಷರ ಮೇಲೆ ಗುರುತರವಾದ ಆಪಾದನೆ ಇದೆ. ಆದರೆ, ಇವರ ಉತ್ತರದಲ್ಲಿ ಅಧ್ಯಕ್ಷರ ಮೇಲೆ ಏನನ್ನೂ ತೋರಿಸಿಲ್ಲ. ಸರ್ಕಾರಿ ನೌಕರರು ಈಗ ವರದಿ ಕೊಡುತ್ತಿದ್ದಾರೆ. ಇದರಲ್ಲಿ ಮೊದಲಿನ ಅಪರಾಧಿ ಹಿಂದಿನ ಅಧ್ಯಕ್ಷರಾಗಿದ್ದ ಎಂ.ವೀರಣ್ಣನವರು. ಅವರು ಎರಡೂವರೆ ಕೋಟಿ ರೂಪಾಯಿ ದುರುಪಯೋಗ ಮಾಡಿದ್ದಾರೆ. ಅವರಿಂದ ಆ ಹಣವನ್ನು ವಸೂಲಿ ಮಾಡಿ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹಾಕಬೇಕೆಂದು ಲೋಕಾಯುಕ್ತರವರು ವರದಿಯನ್ನು ನೀಡಿದ್ದಾರೆ. ಲೋಕಾಯುಕ್ತರ ವರದಿ ಸೆಪ್ಟೆಂಬರ್ ತಿಂಗಳಿನಲ್ಲೇ ಬಂದಿದೆ. ವರದಿ ಬಂದು 6 ತಿಂಗಳಾದರೂ ಅವರ ಮೇಲೆ ಇದುವರೆವಿಗೂ ಯಾವುದೇ ಕೇಸನ್ನು ಹಾಕಿಲ್ಲ. ಯಾವುದೇ ನೋಟೀಸ್ ಕಳುಹಿಸಿಲ್ಲ. ಸರ್ಕಾರ ಅವರನ್ನೇಕೆ ಉಳಿಸುತ್ತಿದೆ? ಅವರು ಈಗಲೂ ಗೂಂಡಾಗಿರಿ ಮಾಡಿ ಇಡೀ ನಗರ ಸಭೆಯನ್ನು ಸರ್ವಾಧಿಕಾರಿಯಾಗಿ ತನ್ನ ಕೈಯಲ್ಲಿಟ್ಟುಕೊಂಡಿದ್ದಾರೆ. ಅಂಥವರ ಮೇಲೆ ಕ್ರಮ ತೆಗೆದುಕೊಂಡು ಸರ್ಕಾರಕ್ಕೆ ಬರುವ ಹಣವನ್ನು ವಸೂಲಿ ಮಾಡಲಿಲ್ಲ. ಯಾವುದರಲ್ಲೂ ಅವರ ಹೆಸರೇ ಇಲ್ಲ. ಸರ್ಕಾರದ ಈ ಉತ್ತರದಲ್ಲಿ ಅಧ್ಯಕ್ಷರ ಹೆಸರೇ ಇಲ್ಲ. ಇಲ್ಲಿ ಮೊದಲು ಅಪರಾಧಿ ನಗರಸಭೆಯ ಅಧ್ಯಕ್ಷರು. ಆದರೆ, ಉತ್ತರದಲ್ಲಿ ಅವರ ಹೆಸರೇ ಇಲ್ಲ. ಅವರ ಮೇಲೆ ಏಕೆ ಕ್ರಮ ತೆಗೆದುಕೊಳ್ಳಲಿಲ್ಲ ಎಂಬುದು ನನ್ನ ಪ್ರಶ್ನೆ. 18%ನಲ್ಲಿ ಸುಮಾರು ಎರಡೂವರೆ ಕೋಟಿ ರೂಪಾಯಿ ಕಳೆದ ಐದು ವರ್ಷದಲ್ಲಿ ದುರುಪಯೋಗವಾಗಿದೆ. ಶಾಸಕನಾಗಿ ನಾನೂ ಆ ನಗರಸಭೆಯಲ್ಲಿ ಸದಸ್ಯನಾಗಿದ್ದೇನೆ. ಆದರೆ, ಎಂದೂ 18% ಕೊಟ್ಟಿರುವ ಜನರ ಬಗ್ಗೆ ಅನುಮೋದನೆಗೆ ಬರಲಿಲ್ಲ. ಬಜೆಟ್‌ನಲ್ಲಿ ಕೇವಲ 18% ಎಂದು ಅನುಮೋದನೆಗೆ ತೆಗೆದುಕೊಂಡು ಎಲ್ಲವನ್ನೂ ಅವರ ಹಿಂಬಾಲಕರಿಗೆ ಕೊಟ್ಟು ದುರುಪಯೋಗವಾಗಿದೆ. ಅವರ ಮೇಲೆ ಈಗ ಕ್ರಮ ಜರುಗಿಸುವುದಾಗಿ ಹೇಳುತ್ತಾರೆ. ಆದರೆ, ಯಾವಾಗ ಕ್ರಮ ಜರುಗಿಸುತ್ತಾರೆ? ಲೋಕಾಯುಕ್ತರ ವರದಿ ಬಂದು ಮೂರು ತಿಂಗಳೊಳಗಾಗಿ ಕ್ರಮ

ತೆಗೆದುಕೊಳ್ಳಬೇಕೆಂದು ಕಾನೂನಿದೆ. ಆದರೆ ಆರು ತಿಂಗಳಾದರೂ ಇದುವರೆಗೆ ಕ್ರಮಜರುಗಿಸಿಲ್ಲ. ಏಕೆ ಕ್ರಮ ತೆಗೆದುಕೊಳ್ಳಲಿಲ್ಲ ಎಂಬುದು ನನ್ನ ಪ್ರಶ್ನೆ? ಇದರ ಬಗ್ಗೆ ಎಂದು ಕ್ರಮ ತೆಗೆದುಕೊಳ್ಳುತ್ತೀರಿ? ಈ 18% ಹಣದ ದುರುಪಯೋಗದ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳುತ್ತೀರಿ? ಇದರ ಬಗ್ಗೆ ಸದನದ ಸಮಿತಿ ರಚನೆ ಮಾಡಿ ಆ ನಗರ ಸಭೆಗೆ ಕಳುಹಿಸಿ ಅಲ್ಲಿ ಆಗಿರುವ ಅವ್ಯವಹಾರದ ಬಗ್ಗೆ ತನಿಖೆ ಮಾಡಿಸಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಆರ್. ಅಶೋಕ್ :– ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ 3–10–2006 ರಲ್ಲೇ ಪೌರಾಡಳಿತ ಇಲಾಖೆಗೆ ಲೋಕಾಯುಕ್ತರ ವರದಿ ಬಂದಿದೆ. ಅದರ ಮೇಲೆ ಎರಡು ರೀತಿಯ ಕ್ರಮ ಜರುಗಿಸಲು ಲೋಕಾಯುಕ್ತರು ಸೂಚನೆ ಮಾಡಿದ್ದಾರೆ. ಒಂದು, ಸರ್ಕಾರಕ್ಕೇನು ನಷ್ಟವಾಗಿದೆ ಅದನ್ನು ವಸೂಲಿ ಮಾಡಬೇಕು. ಎರಡನೆಯದ್ದು,

ಶ್ರೀ ಎ. ಪಾಪರೆಡ್ಡಿ :– ಯಾರ್ಯಾರು ಸರ್ಕಾರಿ ನೌಕರರಿದ್ದಾರೆ ಅವರ ಹೆಸರುಗಳನ್ನು ಕೇಳಿ ಅದು ದಾಖಲೆಗೆ ಹೋಗಲಿ.

ಶ್ರೀ ಆರ್. ಅಶೋಕ್ :– ಲೋಕಾಯುಕ್ತರು ಅಲ್ಲಿನ ಅಧಿಕಾರಿಗಳು ಯಾರಿದ್ದಾರೆ ಮತ್ತು ಅಧ್ಯಕ್ಷರು ಯಾರಿದ್ದಾರೆ ಅವರ ಮೇಲೆ ಪಕ್ಕಾ ಆಪಾದನೆಯನ್ನು ಮಾಡಿದ್ದಾರೆ. ಅವರು ಅವ್ಯವಹಾರ ಮಾಡಿದ್ದಾರೆಂದು ಲೋಕಾಯುಕ್ತರು ವರದಿ ಕೊಟ್ಟಿದ್ದಾರೆ. ಎರಡನೆಯದು, ಅದರಲ್ಲಿ ಯಾರು ಇಂಜಿನಿಯರ್ಸ್ ಭಾಗಿಯಾಗಿದ್ದರು ಅವರ ಮೇಲೆ ಕಾನೂನಿನ ರೀತಿ ಕ್ರಮ ತೆಗೆದುಕೊಳ್ಳಿಯೆಂದು ವರದಿಯಲ್ಲಿ ಹೇಳಿದ್ದಾರೆ. ಅವರ ಮೇಲೆ ಕ್ರಮ ಜರುಗಿಸಬೇಕೆಂದು ಅಧಿಕಾರಿಗಳಿಗೆ ಈಗಾಗಲೇ ಸೂಚನೆ ಮಾಡಿದ್ದೇವೆ. ಯಾರು ತಪ್ಪಿತಸ್ಥರಾಗಿದ್ದಾರೆ, ಲೋಕಾಯುಕ್ತದವರೇನು ವರದಿ ಕೊಟ್ಟಿದ್ದಾರೆ ಅದರ ಪ್ರಕಾರ ಅಲ್ಲಿನ ಅಧ್ಯಕ್ಷರಿರಬಹುದು, ಅಧಿಕಾರಿಗಳಿರಬಹುದು ಅವರ ಮೇಲೆ ಸೂಕ್ತ ಕ್ರಮವನ್ನು ಪೌರಾಡಳಿತ ಇಲಾಖೆ ತೆಗೆದುಕೊಳ್ಳುತ್ತದೆ.

6) ವಿಷಯ :– ಮೂಡಿಗೆರೆಯಲ್ಲಿ ಅರಣ್ಯ ಪ್ರದೇಶಗಳಿಂದ ಒಕ್ಕಲೆಬ್ಬಿಸಿದ ರೈತರ ಬಗ್ಗೆ.

ಶ್ರೀ ಎಂ.ಪಿ. ಕುಮಾರಸ್ವಾಮಿ (ಮೂಡಿಗೆರೆ) :– ಮಾನ್ಯ ಅಧ್ಯಕ್ಷರೇ, ಮೂಡಿಗೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಕುಂದೂರು, ಸಾರಗೋಡು ಹಾಗೂ ಬೈರಗದ್ದೆ ಅರಣ್ಯ ಪ್ರದೇಶಗಳಿಂದ ಒಕ್ಕಲೆಬ್ಬಿಸಿದ ರೈತರುಗಳಿಗೆ ಬದಲಿ ಭೂಮಿಯನ್ನು ನೀಡದಿರುವ ಬಗ್ಗೆ ಅರಣ್ಯ ಪರಿಸರದ ಹಾಗೂ ಜೀವಿಶಾಸ್ತ್ರ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಆರ್. ಅಶೋಕ್ (ಆರೋಗ್ಯ ಸಚಿವರು) (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಪರವಾಗಿ) :– ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಸಾರಗೋಡು ಮೀಸಲು ಅರಣ್ಯ ವ್ಯಾಪ್ತಿಯಲ್ಲಿ ಅರಣ್ಯ ಭೂಮಿಯ ಅತಿಕ್ರಮಣಗಳನ್ನು ಖಿಲ್ಲಾಪಡಿಲಾಗುವ ಕಾರ್ಯ ಪ್ರಗತಿಯಲ್ಲಿರುತ್ತದೆ. ಇದರಿಂದ ಖಿಲ್ಲಾಪಡಿಸಲಾದ ಭೂರಹಿತ